



# ಮನುಷ್ಯನ ಹಸ್ತಕ್ಷೇಪ ನೆಚ್ಚಿದ ಮನಿ ಪ್ಲಾಂಟ್



**ಮನೆ, ಕಚೇರಿ, ಅಂಗಡಿ... ಸಾಮಾನ್ಯವಾಗಿ ಎಲ್ಲೆಲ್ಲೂ ಕಾಣಸಿಗುವ ಸಸ್ಯ 'ಮನಿ ಪ್ಲಾಂಟ್'. ಎಂಥ ಜಟಿಲ ಪರಿಸ್ಥಿತಿಯಲ್ಲಿಯೂ ಸುಲಭವಾಗಿ ಬೆಳೆಯುವ ಈ ಸಸ್ಯದೊಂದಿಗೆ ಅದೃಷ್ಟದ ಹಂಬಲವೂ ತಳುಕು ಹಾಕಿಕೊಂಡಿದೆ.**

■ ಸೀಮಾ ಹೆಗಡೆ

ಚೀನಾದ ಫೆಂಗ್ ಶೂಯಿ ಬಗ್ಗೆ ಕೇಳಿರುತ್ತೀರಿ. ನಮ್ಮ ಸುತ್ತಲಿನ ವಸ್ತುಗಳಿಂದ ಪ್ರವಹಿಸುವ ಶಕ್ತಿ ನಮ್ಮ ಭಾವ, ಸಂಬಂಧ, ಆರೋಗ್ಯ, ಸಂಪತ್ತಿನ ಮೇಲೆ ಪರಿಣಾಮ ಬೀರಬಲ್ಲದು ಎನ್ನುತ್ತದೆ ಈ ಪ್ರಾಚೀನ ಪದ್ಧತಿ. ಫೆಂಗ್ ಶೂಯಿಯ ತತ್ವಗಳೊಂದಿಗೆ ಸದ್ದಿಲ್ಲದೆ ನಮ್ಮ ದೇಶವನ್ನು ಆಕ್ರಮಿಸಿದ್ದು ಮನಿ ಪ್ಲಾಂಟ್‌ನಂತಹ ಒಳಾಂಗಣ ಸಸ್ಯಕುಲ. ಪೆಸಿಫಿಕ್ ಸಾಗರದ ದ್ವೀಪಗಳಲ್ಲಿ ಹುಟ್ಟಿದ ಮನಿ ಪ್ಲಾಂಟ್ ಚೀನಾದ ಸಂಸ್ಕೃತಿಯೊಡನೆ ಬೆರೆತು ಭಾರತದ ವಾಸ್ತು ಪ್ರಕಾರಕ್ಕೂ ಸೈ ಎನಿಸಿಕೊಂಡಿದ್ದು ಆಶ್ಚರ್ಯವೇ ಸರಿ. ಈಗಂತೂ ಮನೆ, ಕಚೇರಿ, ಕೆಫೆ, ಅಂಗಡಿ, ಶಾಲೆ–ಕಾಲೇಜು, ಆಸ್ಪತ್ರೆ ಹೀಗೆ ಎಲ್ಲಾ ಸ್ಥಳಗಳಲ್ಲೂ ಕಾಣಸಿಗುವ ಸಸ್ಯವೊಂದಿದ್ದರೆ ಅದು ಮನಿ ಪ್ಲಾಂಟ್.

ಅದ್ಹೇಗೆ ಮನಿ ಪ್ಲಾಂಟ್ ಹಳೆಯ ಪದ್ಧತಿಯಿಂದ ಶುರುವಾಗಿ ಆಧುನಿಕ ಜಮಾನದ ಭಾಗವಾಯಿತೋ ಯಾರೂ ತಿಳಿಯರು. ಆಕರ್ಷಕ ಹಸುರು ಹೊಳಪಿನ ಎಲೆ, ನೆರಳಲ್ಲೂ ಸಮೃದ್ಧ ಬೆಳವಣಿಗೆ, ಸುಲಭ ಆರೈಕೆ, ಗಾಳಿ ಶುದ್ಧೀಕರಿಸಬಲ್ಲ ಹಣೆಪಟ್ಟಿ, ಈ ಎಲ್ಲಾ ಕಾರಣಕ್ಕೆ ಅಭಿವೃದ್ಧಿ, ಅದೃಷ್ಟದ ಸಂಕೇತವಾಗಿ ಮನಿ ಪ್ಲಾಂಟ್ ಬಳಕೆಗೆ ಬಂದಿರಬೇಕು. ಮೇಲಿನ ಹೇಳಿಕೆಗಳಿಗೆ ವೈಜ್ಞಾನಿಕವಾಗಿ ಯಾವುದೇ ಆಧಾರವಿಲ್ಲದಿದ್ದರೂ ಭಾವನಾತ್ಮಕವಾಗಿ ಬೆಸುಗೆ ಆಗಿಹೋಗಿದೆ! ಹಣದ ಹೊಳೆ ಹರಿಸುವ ಭ್ರಮೆಯೊಂದಿಗೆ ಮನಿ ಪ್ಲಾಂಟ್ ಎಲ್ಲೆಡೆ ಹೊಕ್ಕಿಬಿಟ್ಟಿದೆ. ಎಷ್ಟರ ಮಟ್ಟಿಗೆಯೆಂದರೆ ಶ್ರೀಲಂಕಾದ ಕಾಡುಗಳಲ್ಲಿ ಯಾವುದೇ ಶತ್ರುಗಳಿಲ್ಲದೆ ಸೊಕ್ಕಿ ಬೆಳೆದು ಸ್ಥಳೀಯ ಸಸ್ಯಸಂಪತ್ತನ್ನು ಹಾಳುಗೆಡವಿದೆ. ಆಫ್ರಿಕಾ, ಆಸ್ಟ್ರೇಲಿಯಾ, ಏಷ್ಯಾದ ಉಷ್ಣವಲಯದ ಪ್ರದೇಶಗಳ ಪರಿಸರಕ್ಕೆ ಮಾರಕವಾಗಿ ಪರಿಣಮಿಸಿದೆ.

ಕೆಸುವಿನ ಕುಟುಂಬವಾದ 'ಅರೇಸೆ'ಗೆ ಸೇರಿದ ಮನಿ ಪ್ಲಾಂಟ್ ವೈಜ್ಞಾನಿಕ ಹೆಸರು 'ಎಪಿಪ್ರೆಮ್ನಮ್ ಔರಿಯಮ್'. ಹಳೆಯ ಹೆಸರು ಪೋಥೋಸ್ ಕೂಡ ರೂಢಿಯಲ್ಲಿದೆ. ಜೇಡ್ ಪೋಥೋಸ್, ಸ್ಯಾಟಿನ್ ಪೋಥೋಸ್, ಗೋಲ್ಡನ್ ಪೋಥೋಸ್, ನಿಯಾನ್, ಎನ್'ಜಾಯ್, ಮಾರ್ಬಲ್ ಕ್ವೀನ್, ಸ್ನೋ ಕ್ವೀನ್, ಮಂಜುಲಾ ಮುಂತಾದ ಹಲವು ಬಣ್ಣ, ವಿನ್ಯಾಸದ ತಳಿಗಳನ್ನು ಗುರುತಿಸಲಾಗಿದೆ.

ಎಂತಹ ಕೆಟ್ಟ ಪರಿಸ್ಥಿತಿಯನ್ನೂ ಜಯಿಸಬಲ್ಲ ಮನಿ ಪ್ಲಾಂಟ್‌ಗಳ ಕಾಳಜಿ ಅತ್ಯಂತ ಸುಲಭದ್ದು. ನೀರು ಬಸಿಯುವ ಪೋಷಕಾಂಶಯುಕ್ತ ಮಣ್ಣು, ಅಗತ್ಯಕ್ಕೆ ತಕ್ಕಂತೆ ನೀರು ಕೊಟ್ಟಲ್ಲಿ ಸೊಂಪಾಗಿ ಬೆಳೆಯಬಲ್ಲವು. ನೆರಳು, ಮಬ್ಬುಗತ್ತಲೆಯಿಂದ ಪ್ರಕಾಶಮಾನ ಬೆಳಕಿರುವ ಕೋಣೆಯ ಎಲ್ಲಾ ಭಾಗಗಳಲ್ಲೂ ಹೊಂದಿಕೊಳ್ಳಬಲ್ಲವು. ತೀರಾ ನೆರಳಾದಲ್ಲಿ ಬಿಳುಚಿಕೊಂಡು ಬಳ್ಳಿಬಳ್ಳಿಯಾಗಿ ಆಕಾರ ಕಳೆದುಕೊಳುತ್ತವೆ. ಸೂರ್ಯನ ನೇರ ಬೆಳಕು ಎಲೆಗಳನ್ನು ಸುಡಬಲ್ಲದು. ವಾತಾವರಣದಲ್ಲಿ ತೇವಾಂಶದ ಕೊರತೆಯಾದರೂ ಎಲೆಯ ತುದಿ ಸುಡುವುದನ್ನು ಗಮನಿಸಬಹುದು. ಉಳಿದಂತೆ ಎಲೆಗಳು ಹಳದಿಯಾಗುವಿಕೆ, ಸೊರಗುವಿಕೆ ಮುಂತಾದ ಸಮಸ್ಯೆಗಳು ಎದುರಾಗಬಹುದು. ಹೆಚ್ಚಿನ ನೀರು–ಪೋಷಕಾಂಶ ನಿರ್ವಹಣೆಯಿಂದಲೇ ಈ ಸಮಸ್ಯೆ ದೂರವಾಗುತ್ತದೆ. ಆರಂಭಿಕರಿಗೆ ನಂಬರ್ ಒನ್ ಸಸ್ಯ.

ವೇಗವಾಗಿ ಬೆಳವಣಿಗೆ ಹೊಂದುವ ಮನಿ ಪ್ಲಾಂಟ್ ಕೆಲವೇ ತಿಂಗಳಲ್ಲಿ ಕುಂಡದ ಪೂರ್ತಿ ಮಣ್ಣನ್ನು ಬೇರಿನಿಂದ ಆವರಿಸಬಹುದು; ಆಗಾಗ ರೀಪಾಟಿಂಗ್ ಅಗತ್ಯ. ಹುಸಿ ಬೇರು ಬಿಟ್ಟು ಬಳ್ಳಿಯಾಗಿ ಹಬ್ಬುತ್ತಾ ಸಾಗುವ ಕಾರಣ ಆಧಾರ ಬೇಕಾಗಬಹುದು ಅಥವಾ ಅವುಗಳನ್ನು ತೂಗುಕುಂಡದಲ್ಲಿ ಇಳಿಬಿಡಬಹುದು. ಪೊದೆಯಂತಹ ಆಕಾರ ನೀಡಲು ಟ್ರಿಮ್ಮಿಂಗ್ ಬೇಕಾಗಬಹುದು. ಹೀಗೆ ಟ್ರಿಮ್ ಮಾಡಿದ ಕಟಿಂಗ್ಸ್‌ಗಳಿಂದಲೇ ಸಸ್ಯಾಭಿವೃದ್ಧಿ ಮಾಡಬಹುದು; ಕಟಿಂಗ್ಸ್‌ಗಳನ್ನು ಗಾಜಿನ ಬಾಟಲಿ ನೀರಿನಲ್ಲೂ ಬೆಳೆಸಬಹುದು. ಅಕ್ವೇರಿಯಮ್, ಟೆರೇರಿಯಮ್‌ಗಳಿಗೂ ಸೂಕ್ತ. ಕ್ಯಾಲ್ಶಿಯಮ್ ಆಕ್ಸಲೇಟ್ ಹರಳುಗಳನ್ನು ಹೊಂದಿರುವ ಕಾರಣ ಇವುಗಳ ಎಲೆ ಸಾಕುಪ್ರಾಣಿಗಳಿಗೆ, ಸ್ವಲ್ಪ ಮಟ್ಟಿಗೆ ಮನುಷ್ಯರಿಗೂ ವಿಷಕಾರಿ ಎಂದು ಹೇಳಲಾಗಿದೆ.

ಕೊನೆಯದಾಗಿ, ಮನಿ ಪ್ಲಾಂಟ್ ಹೂ ಬಿಡುವುದು ತೀರಾ ಅಪರೂಪ. ಬೀಜ ಬಿಟ್ಟು ಸಸ್ಯ ಪ್ರಸರಣ ಮಾಡಲಾಗದ ಕಾರಣ ನೈಸರ್ಗಿಕವಾಗಿ ಇತರೆ ಪ್ರದೇಶಗಳನ್ನು ಹೊಕ್ಕುವುದು ಸಾಧ್ಯವಿಲ್ಲ. ಮಾನವ ಹಸ್ತಕ್ಷೇಪದಿಂದ ಮಾತ್ರ ಸಾಧ್ಯ.

ಪ್ರತಿಕ್ರಿಯಿಸಿ: feedback@sudha.co.in

